ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಬಿಲೋ ಪಾವರ್ಟಿಲೈನ್ ಇದ್ದವರಿಗೆ ಮನೆಗಳನ್ನು ಕೊಟ್ಟು ಈಗ ಅವರಿಂದ ಸಾಲ ವಸೂಲಿಯಾಗಿಲ್ಲವೆಂದರೆ ಏನು ? ಮತ್ತೆ ಮನೆಗಳನ್ನು ಕೊಡುವುದಿಲ್ಲವೆಂದ ಮೇಲೆ ಮಂತ್ರಿಗಳು ಏಕೆ ಇರಬೇಕು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹೌಸಿಂಗ್ ಸ್ಕೀಮ್ ಇಲ್ಲವೆಂದ ಮೇಲೆ ಹೌಸಿಂಗ್ ಮಿನಿಷ್ಟರ್ ಏಕೆ ಬೇಕು ?

ಶ್ರೀ ಮೊಹಮದ್ ಮೊಯಿನುದ್ದೀನ್.—ಮಾನ್ಯ ಅಧ್ಯಕ್ಷರೇ, ಹುಡ್‌ಕ್ಕೊ ಸಾಲ ಬರದಿದ್ದರೆ ಮನೆ ಕಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಸಾಲಗಳು ವಾಪಸ್ ಬರಬೇಕು. These are the facts which are existing as on today. Without recovering the loan we hannot repay the amount to HUDCO and if we do not repay the amount HUDCO, we will not get money from them. This is the real fact. Government cannot divert funds from any other scheme to this scheme. Recovery is a must and without recovering the loan, the scheme will be slow in progress. But the work will not be stopped. As and when money is recoveryed, the Housing programme will be progressive. We have not taken up thematter with the HUDCO authorities. Now, the Zilla Parishads and Mandal Panchayats will be in direct link with the HUDCO and the Government will not come into the picture at all. Zilla Parishads and Mandal Panchayats will be directly rerpensible to the HUDCO and this will be the set up In each district and every district will have as many houses as possible. This is my submission.

ಶ್ರೀ ಎನ್. ಧರ್ಮಸಿಂಗ್.—ಮನೆ ಕೊಡುವುದನ್ನು ನಿಲ್ಲಿಸುತ್ತೇವೆಂದು ಹೇಳುತ್ತಿದ್ದಾರೆ. ಅಂದರೆ ಈ ಸರ್ಕಾರಕ್ಕೆ ಬಡವರ ಬಗ್ಗೆ ಅಂತಃ ಕರಣವಿಲ್ಲವೆಂದು ಹೇಳಬೇಕಾಗುತ್ತದೆ.

ಮಂಗಳೂರಿನಲ್ಲಿರುವ ವಿಮಾನ ಹಾರಾಟ ತರಬೇತಿ ಶಾಲೆ

೪೧೦. ಶ್ರೀ ಬ್ಲೆಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಗಳೂರಿನಲ್ಲಿ ವಿಮಾನ ಹಾರಾಟ ತರಬೇತಿ ಶಾಲೆಯನ್ನು ನಿಲುಗಡೆಗೊಳಿಸಲು ಕಾರಣವೇನು?

ಆ) ಈ ತರಬೇತಿ ಶಾಲೆಯನ್ನು ಪುನರ್ ಪ್ರಾರಂಭಿಸುವ ಯೋಚನೆ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಯಾವಾಗಿನಿಂದ ಪ್ರಾರಂಭಿಸುವರು?

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು),—

ಅ) ವಿದ್ಯಾರ್ಹತೆ ಹೊಂದಿರುವ ವಿಮಾನ ತರಬೇತಿ ಚಾಲಕರು ಇಲ್ಲದೆ ಇರುವ ಪ್ರಯುಕ್ತ.

ಆ) ಹೌದು, ವಿಮಾನ ತರಬೇತಿ ಚಾಲಕರ ಸೇವೆಯನ್ನು ಪಡೆಯಲು ಕ್ರಮಕೈಗೆದುಕೊಳ್ಳಲಾಗುತ್ತಿದೆ.

ಇ) ವಿದ್ಯಾರ್ಹತೆಯುಳ್ಳ ವಿಮಾನ ತರಬೇತಿ ಚಾಲಕರು ದೊರೆತ ಕೂಡಲೇ ಪುನಃ ಪ್ರಾರಂಭಿಸಲಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಕೌನ್ಸಿಲ್‌ಗೆ ಹೋಗಿದ್ದಾರೆ,

ಶ್ರೀ ಎಂ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಯಾವಾಗಲೂ ಇಲ್ಲಿ ಸಂಬಂಧಪಟ್ಟ ಮಂತ್ರಿಗಳು ಇರುವುದಿಲ್ಲ, ಮತ್ತೆ ಮುಖ್ಯಮಂತ್ರಿಗಳು ಇರುವುದಿಲ್ಲ. ಹತ್ತು ದಿನಗಳು ನಡೆಯುವ ತಕ್ಕಂಥ ಸೇಷನ್‌ನಲ್ಲೂ ಕೂಡ ಮುಖ್ಯಮಂತ್ರಿಗಳು ಇರುವುದಿಲ್ಲ. ಮತ್ತೆ ಬೇರೆ ಮಂತ್ರಿಗಳೂ ಇರುವುದಿಲ್ಲ. ಸೆಷನ್ ನಡೆಯುವಾಗ ಮುಖ್ಯಮಂತ್ರಿಗಳು ಡೆಲ್ಲಿಗೆ ಪೋಸಿಷನ್ ಎೂಟಿಂಗ್‌ಗೆ ಹೋಗುತ್ತಾರೆ. ಬೇರೆ ಸಮಯದಲ್ಲಿ ಅವೇರಿಕಾಗೆ ಹೋಗುತ್ತಾರೆ, ಸೆಷನ್ ನಡೆಯುವಾಗ ಡೆಲ್ಲಿಗೆ ಹೋಗುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ಕರೆದಂತಹ ಸಭೆಗೆ ಮುಖ್ಯಮಂತ್ರಿಗಳು ಹೋಗಿದ್ದಾರೆ. ಈ ವಿಚಾರವನ್ನು ನಿನ್ನೆಯೇ ಅವರು ಸಭೆಯಲ್ಲಿ ಹೇಳಿದ್ದಾರೆ. ಅದಕ್ಕೆ ಎಲ್ಲರೂ ಒಪ್ಪಿಗೆ ಕೊಟ್ಟಿದ್ದಾರೆ? ಆದರೆ ಇವತ್ತು ಅವರ ಬಗ್ಗೆ ಟೀಕೆ ಮಾಡುವುದು ಸರಿಯಲ್ಲ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ರಾಜಕೀಯ ಮಾಡುವುದಕ್ಕೆ ಡೆಲ್ಲಿಗೆ ಹೋಗಿದ್ದಾರೆ. ಈ ಸೆಷನ್ ಬಹಳ ಮುಖ್ಯವಾದದು. ಕೇಂದ್ರ ಸರ್ಕಾರದವರು ಕರೆದರೆ ಅದಕ್ಕೆ ಯಾರನ್ನಾದರೂ ಡೆಪ್ಯೂಟೈಸ್ ಮಾಡಬೇಕಾಗಿತ್ತು. He is answerable to the House. He could have deputised somebody

(INTERRUPTIONS)

ಅಧ್ಯಕ್ಷರು.—ತಾರೀಖು ೯-೯-೮೭ರಂದು ರಾಷ್ಟ್ರೀಯ ಜಲಮಂಡಳಿ ಸಭೆಯಲ್ಲಿ ನಾನು ಭಾಗವಹಿಸಬೇಕಾಗಿರುವುದರಿಂದ ತಾರೀಖು ೮-೯-೮೭ ರಿಂದ ೧೦-೯-೮೭ರವರೆಗೆ ವಿಧಾನಸಭೆಯ ಕಾರ್ಯಕಲಾಪಗಳಲ್ಲಿ ನನಗೆ ಭಾಗವಹಿಸಲು ಸಾಧ್ಯವಾಗದಿರುವ ಕಾರಣ ನಾನು ನನ್ನ ಇಲಾಖೆಗೆ ಸಂಬಂಧ ಪಟ್ಟ ಕಾರ್ಯಕಲಾಪಗಳಿಲ್ಲವನ್ನು ಮಾನ್ಯ ಕಾನೂನು ಸಚಿವರಾದ ಶ್ರೀ ಲಕ್ಷ್ಮೀಸಾಗರ್‌ರವರಿಗೆ ತಿಳಿಸಿದ್ದೇನೆ. ಈ ವ್ಯವಸ್ಥೆಗೆ ತಾವು ಅನುಮತಿ ನೀಡಬೇಕೆಂದು" ತಿಳಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಇದಕ್ಕೆ ಮಾನ್ಯ ದೇವೆಗೌಡರು ಸಹ ಹೋಗಿದ್ದಾರೆ. ಅವರು ಎಸೆನ್ಷಿಯಲ್ ಮಿನಿಸ್ಟರು. ಅಲ್ಲಿ ಮುಖ್ಯಮಂತ್ರಿಗಳ ಅವಶ್ಯಕತೆ ಏನಿತ್ತು? ಇದಕ್ಕೆ ಸಂಬಂಧಪಟ್ಟ ಪಿ.ಡಬ್ಲ್ಯ್ಯೂ.ಡಿ. ಮಿನಿಸ್ಟರು ಹೋಗಿದ್ದಾರೆ. ಇವರು ಹೋಗಿರುವುದು ಅಲ್ಲಿ ರಾಜಕೀಯ ಮಾಡುವುದಕ್ಕೆ. ಇಲ್ಲಿನ ಸಮಸ್ಯೆಗಳನ್ನು ಬಗೆಹರಿಸುವುದಕ್ಕಲ್ಲ. ಆ ಸಮಸ್ಯೆಗಳನ್ನು ಬಗೆಹರಿಸಿ ಜನರಿಗೆ ಸಹಾಯ ಮಾಡಬೇಕು ಎನ್ನುವ ಯೋಚನೆಯಿಂದ ಅವರು ಹೋಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ — ಮಾನ್ಯ ಅಧ್ಯಕ್ಷರೇ, ವಾಟರ್ ರಿಸೋರ್ಸಸ್ ಕಮಿಟಿಯಲ್ಲಿ ಮುಖ್ಯ ಮಂತ್ರಿಗಳು ಸದಸ್ಯರಾಗಿದ್ದಾರೆ. ಅವರು ಈ ಸಭೆಯಲ್ಲಿ ಭಾಗವಹಿಸಬೇಕಾಗಿತ್ತು, ಅದಕ್ಕಾಗಿಯೇ ಅವರು ತಮ್ಮ ಅಪ್ಪಣೆಯನ್ನು ತೆಗೆದುಕೊಂಡು ಹೋಗಿದ್ದಾರೆ, ಅವರು ರಾಜಕೀಯವನ್ನು ಮಾಡುತ್ತಾರೆ. ಮತ್ತೆ ಸರ್ಕಾರದ ಕೆಲಸವನ್ನು ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅವರು ರಾಜಕೀಯವನ್ನು ಮಾಡುವುದಕ್ಕೆ ಡೆಲ್ಲಿಗೆ ಹೋಗಿದ್ದಾರೆ.

ಅಧ್ಯಕ್ಷರು.—ಇಲ್ಲಿ ಎಲ್ಲರೂ ರಾಜಕೀಯ ಮಾಡುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೧೯೭೨ ರಿಂದ ಇವೊತ್ತಿನವರೆಗೂ ಈ ಗೌವರ್ನಮೆಂಟ್‌ನಲ್ಲಿ ಸಿಟ್ಟಿಂಗ್ ಬಹಳ ಕಡಿಮೆಯಾಗಿರುತ್ತದೆ.

ಶ್ರೀ ಎಂ. ಎಸ್, ಕೃಷ್ಣನ್.—ಮಾನ್ಯ ಅಧ್ಯಕ್ಷರೆ, ಇದನ್ನು ಮಾನ್ಯ ಗುಂಡೂರಾಯರು ಮಾಡಲಿಲ್ಲವೆ? ಮಾನ್ಯ ದೇವರಾಜ್ ಅರಸ್‌ರವರು ಮಾಡಲಿಲ್ಲವೆ?...

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಕಾನೂನು ಮಂತ್ರಿಗಳು ಹೇಳಿದ್ದಾರೆ, ದೆಹಲಿಯಲ್ಲಿ ನಡೆಯತಕ್ಕಂಥ ರಾಷ್ಟ್ರೀಯ ಜಲಮಂಡಲಿ ಸಭೆಯಲ್ಲಿ ಮುಖ್ಯಮಂತ್ರಿಗಳು

ಭಾಗವಹಿಸಬೇಕಾಗಿದೆ. ಇದು ನೀರಿನ ವಿವಾದದ ಬಗ್ಗೆ. ಮತ್ತೆ ಟ್ರಿಬೂನಲ್ ನೇಮಿಸುವ ಬಗ್ಗೆ ಮತ್ತೆ ಇದರಲ್ಲಿ ಕಾವೇರಿ ನೀರಿನ ಒಂದು ಮಹತ್ವದ ವಿಚಾರ ಈ ರಾಷ್ಟ್ರೀಯ ಸಭೆಯಲ್ಲಿ ಬರುತ್ತದೆ. ಮುಖ್ಯಮಂತ್ರಿಗಳು ಇದರ ಸದಸ್ಯರಾಗಿದ್ದಾರೆ. ಇದು ರಾಜ್ಯ ಜೀವಾಳದ ಪ್ರಶ್ನೆ ಆಗಿದೆ. ಅಲ್ಲಿ ಪ್ರಧಾನ ಮಂತ್ರಿಗಳು, ಸರ್ಕಾರದ ಇತರ ಮಂತ್ರಿಗಳು, ಬೇರೆ ಕಾರ್ಯಕರ್ತರುಗಳ, ಮುಖಂಡರುಗಳ ಸಭೆಯನ್ನು ಮಾಡುತ್ತಾರೆ. ಇದರಲ್ಲಿ ರಾಜಕೀಯ ಮಾಡುವಂತಹದ್ದೇನಿದೆ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದರಲ್ಲಿ ರಾಜಕೀಯ ಜಾಸ್ತಿಯಾಗಿದೆ. ಇವತ್ತಿನವರೆಗೂ ಕಾವೇರಿ ನೀರಿನ ಬಗ್ಗೆ ಯಾವ್ದದೇ ಒಂದು ತೀರ್ಮಾನವನ್ನು ಮಾಡಿಲ್ಲ. ಅಪ್ರೋಸಿಷನ್ ಲೀಡರ್‌ಗಳನ್ನು ನೋಡುವುದಕ್ಕೆ ಹೋಗಿದ್ದಾರೆ. ರಾಜ್ಯಕ್ಕೆ ಯಾವುದೇ ಒಳ್ಳೆಯ ಕೆಲಸವನ್ನು ಮಾಡುವುದಕ್ಕಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ರಾಮಕೃಷ್ಣ ಹೆಗಡೆಯವರು ರಾಜ್ಯದ ಮುಖ್ಯ ಮಂತ್ರಿಗಳು ಹೌದು, ಹಾಗೂ ರಾಷ್ಟ್ರದ ನಾಯಕರು ಆಗಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ,—ಬೇಗನೆ ಕಳುಹಿಸಿ. ಅವರನ್ನು ರಾಷ್ಟ್ರದ ನಾಯಕರನ್ನು ಮಾಡಿ ಯಾವಾಗ ಡೆಲ್ಲಿಗೆ ಕಳುಹಿಸುತ್ತೀರಿ ಹೇಳಿ?

ಶ್ರೀ ಎಸ್. ಆರ್. ಬೊಮ್ಮಾಯಿ.—ಸಮಯ ಬಂದಾಗ ಹೋಗುತ್ತಾರೆ.

(ಗೊಂದಲ)

ಶ್ರೀ ಬಸವರಾಜ್ ಪಾಟೀಲ್.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಯಾವಾಗ ಉತ್ತರ ಕೊಡಿಸುತ್ತೀರಾ ಎನ್ನುವುದನ್ನು ಹೇಳಲಿಲ್ಲ.

ಅಧ್ಯಕ್ಷರು.—ನಾಡಿದ್ದು ಉತ್ತರ ಕೊಡಿಸುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಕಂಗೆಡಬೇಡಿ ಕೊಳ್ಳಬೇಕು. ಈಗ ಪ್ರಶ್ನೆ ಳಿಟಿ ಶ್ರೀಮತಿ ನಾಗರತ್ನಮ್ಮನವರು ಕೇಳಬೇಕು.

ಅಭಿವೃದ್ಧಿ ಅನುದಾನದ ಬಗ್ಗೆ

ಳಟಿ. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ),—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪ ರಿಂದ ಇಲ್ಲಿಯವರೆಗೆ ರಾಜ್ಯದಲ್ಲಿನ ಪುರಸಭೆಗಳ ಅಭಿವೃದ್ಧಿಗಾಗಿ ಸರ್ಕಾರದವರು ಕೊಟ್ಟಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)?

ಆ) ಸದರೀ ಹಣದಲ್ಲಿ ಖರ್ಚಾಗಿರುವ ಹಣವೆಷ್ಟು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು

ಇ) ಪುರಸಭಾ ಪ್ರದೇಶಗಳ ಅಭಿವೃದ್ಧಿಗಾಗಿ ಸರ್ಕಾರದವರು ಈಗ ಕೈಗೊಂಡಿರುವ ನೂತನ ಯೋಜನೆಗಳಾವುವು (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ?

ಶ್ರೀ ಎಂ. ಚಂದ್ರಶೇಖರ್, (ನಗರಾಭಿವೃದ್ಧಿ ಮಂತ್ರಿಗಳು).—

ಅ) ಹಣ ಬಿಡುಗಡೆ ಮಾಡಿದ ವಿವರವು ಪಟ್ಟಿಯಲ್ಲಿ ಕೊಟ್ಟಿರುತ್ತದೆ.

ಆ) ಪುರಸಭೆಗಳಿಂದ ಪಡೆದು ವಿವರಗಳನ್ನು ಪ್ರತ್ಯೇಕವಾಗಿ ಒದಗಿಸಲಾಗುವುದು

ಇ) ನೂತನ ಯೋಜನೆ ಯಾವುದೂ ಇಲ್ಲ